ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1205 (1158)
ಸದಸ್ಯರ ಹೆಸರು	ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	16.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಾರವಾರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಇರುವ ಎಂ–ಸ್ಯಾಂಡ್ ಘಟಕಗಳು ಎಷ್ಟು; ಈ ಘಟಕಗಳಿಂದ ಸಾರ್ವಜನಿಕರಿಗೆ / ಸರ್ಕಾರಿ ಘಟಕಗಳಿಗೆ ವರ್ಷದಲ್ಲಿ ಎಷ್ಟು ಟನ್ ಎಂ–ಸ್ಯಾಂಡ್ ವಿತರಿಸಲಾಗುತ್ತಿದೆ; (ತಾಲ್ಲೂಕುವಾರು ಜಿಲ್ಲಾವಾರು ಮಾಹಿತಿ ನೀಡುವುದು)	ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರತ್ಯೇಕವಾಗಿ ಎಂ–ಸ್ಯಾಂಡ್ ಘಟಕಗಳು ಇರುವುದಿಲ್ಲ. ಆದರೆ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಕೆಲವು ಕ್ರಷರ್ ಘಟಕಗಳಿಂದ ಅಲ್ಪ ಪ್ರಮಾಣದ ಎಂ–ಸ್ಯಾಂಡ್ ನ್ನು ಉತ್ಪಾದಿಸಲಾಗುತ್ತಿದ್ದು, ವಾರ್ಷಿಕವಾಗಿ ಅಂದಾಜು 116702 ಮೆಟ್ರಿಕ್ ಟನ್ ಎಂ–ಸ್ಯಾಂಡ್ ಉತ್ಪಾದಿಸಲಾಗುತ್ತಿದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ:

ಕ್ರ. ಸಂ.	ತಾಲ್ಲೂಕು	ಕ್ರಷರ್ ಘಟಕದ ಸಂಖ್ಯೆ	ಎಂ–ಸ್ಯಾಂಡ್ ಉತ್ಪಾದನೆ ಪ್ರಮಾಣ (ಮೆ.ಟನ್ ಗಳಲ್ಲಿ)
1	ಕಾರವಾರ	01	180
2	ಅಂಕೋಲಾ	02	9404
3	ಜೋಯಿಡಾ	03	107118
	ಒಟ್ಟು	06	116702

ಕ್ರ.ಸಂ	ಪ್ರಶ್ನೆ	ಉತ್ತರ
ಆ)	ಈ ಘಟಕಗಳಲ್ಲಿ ಉತ್ಪಾದನೆಯಾಗುವ ಒಂದು ಟನ್ ಎಂ–ಸ್ಯಾಂಡ್‌ಗೆ ಸರ್ಕಾರ ನಿಗಧಿಪಡಿಸಿರುವ ದರವೇನು;	ಎಂ–ಸ್ಯಾಂಡ್ ಕ್ರಷರ್ ಘಟಕಗಳಲ್ಲಿ ಉತ್ಪಾದನೆಯಾಗುವ ಎಂ–ಸ್ಯಾಂಡ್ ಗೆ ಸರ್ಕಾರದಿಂದ ಯಾವುದೇ ಮಾರುಕಟ್ಟೆ ದರ ನಿಗದಿಪಡಿಸಿರುವುದಿಲ್ಲ. ಬದಲಿಗೆ ಎಂ–ಸ್ಯಾಂಡ್ ಉತ್ಪಾದಿಸಲು ಬಳಸುವ ಪ್ರತಿ ಟನ್ ಕಟ್ಟಡ ಕಲ್ಲು ಉಪಖನಿಜಕ್ಕೆ ರೂ.70/– ಗಳ ರಾಜಧನವನ್ನು ನಿಗದಿಪಡಿಸಲಾಗಿದೆ.
ಇ)	ಕಳೆದ 3 ವರ್ಷಗಳಲ್ಲಿ ಕಾರವಾರ ಜಿಲ್ಲೆಯಲ್ಲಿ ಎಷ್ಟು ಪ್ರಮಾಣದ ಎಂ–ಸ್ಯಾಂಡ್ ಮಾರಾಟ ಮಾಡಲಾಗಿದೆ; ಹಾಗೂ ಯಾರಿಗೆ ಮಾರಾಟ ಮಾಡಲಾಗಿದೆ; ಆದ್ದರಿಂದ ಬಂದ ಮೊತ್ತವೆಷ್ಟು? (ಸವಿಸ್ತಾರ ತಾಲ್ಲೂಕುವಾರು ವರದಿ ನೀಡುವುದು)	ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಂತೆ ಕ್ರಷರ್ ಘಟಕದ ಮಾಲೀಕರು ರಾಜಧನ ಪಾವತಿಸಬೇಕಾಗಿರುವುದಿಲ್ಲ. ಆದರೆ ಕ್ರಷರ್ ಘಟಕದಲ್ಲಿ ಬಳಕೆ ಮಾಡುವ ಕಚ್ಚಾ ಕಟ್ಟಡ ಕಲ್ಲಿಗೆ ಕಲ್ಲುಗಣಿ ಗುತ್ತಿಗೆದಾರರಿಂದ ರಾಜಧನ ಪಾವತಿಯಾಗುತ್ತದೆ.

--2

		ಈ ರೀತಿ ಕಲ್ಲುಗಣಿ ಗುತ್ತಿಗೆದಾರರಿಂದ ರಾಜಧನ ಪಾವತಿಯಾಗಿರುವ ಉಪಖನಿಜವನ್ನು ಕ್ರಷರ್ ಘಟಕದ ಮಾಲೀಕರುಗಳು ಖರೀದಿಸಿ ಸ್ಟೋನ್ ಕ್ರಷರ್ ಘಟಕದಲ್ಲಿ ಸಂಸ್ಕರಿಸಿದ ಕಟ್ಟಡ ಕಲ್ಲಿನ ಉತ್ಪನ್ನಗಳನ್ನು ಸೆಕೆಂಡರಿ ಖನಿಜ ರವಾನೆ ಪರವಾನಿಗೆ ಪಡೆದು ಸಾಗಾಣಿಕೆ ಮಾಡಬೇಕಾಗಿರುತ್ತದೆ. ಸ್ಟೋನ್ ಕ್ರಷರ್ ಘಟಕದ ಮಾಲೀಕರು ಎಂ-ಸ್ಯಾಂಡ್ ಸಾಗಾಣಿಕೆ ಮಾಡಲು ರಾಜಧನ ಪಾವತಿಸುವುದಿಲ್ಲ. ಎಂ-ಸ್ಯಾಂಡ್ ಘಟಕದ ಮಾಲೀಕರು ಎಂ-ಸ್ಯಾಂಡ್ ನ್ನು ಸಾರ್ವಜನಿಕರಿಗೆ ಮತ್ತು ಸರ್ಕಾರಿ ಕಾಮಗಾರಿಗಳಿಗೆ ಮಾರಾಟ ಮಾಡುತ್ತಿರುತ್ತಾರೆ.

ಸಂಖ್ಯೆ ಸಿಐ 174 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.